# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 16-01-2021 ರಂದು ಸಮಯ 10.30 ಗಂಟೆಗೆ ವಾರ್ಡ್ ಸಂಖ್ಯೆ: 155 ಹನುಮಂತನಗರಕ್ಕೆ ಸಂಬಂಧಪಟ್ಟಂತೆ ಹರಿಹರಗುಡ್ಡ ಉದ್ಯಾನವನ (ತಿಮ್ಮೇಶಪ್ರಭು ಉದ್ಯಾನವನ)ದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.**

1. ಶ್ರೀ ಕೆ.ಚಂದ್ರಶೇಕರ್ (ಕಂದಾಯ ಅಧಿಕಾರಿ ಮಹದೇವಪುರ), ನೋಡಲ್ ಅಧಿಕಾರಿಗಳು – ಅಧ್ಯಕ್ಷರು
2. ಶ್ರೀ ಗಿರೀಶ ವಿ. ಕುಡಾಳಕರ, ಸಹಾಯಕ ಅಭಿಯಂತರರು ವಾ.ಸಂ.-155 – ಸದಸ್ಯ ಕಾರ್ಯದರ್ಶಿ
3. ಶ್ರೀ. ನಟರಾಜ್ (ಹಿ.ಆ.ಪ.) - ಸದಸ್ಯರು
4. ಶ್ರೀಮತಿ.ಜ್ಯೋತಿ ವಿ.(ಟಿ.ಇ.)– ಸದಸ್ಯರು
5. ಶ್ರೀ ಪ್ರಕಾಶ್ (ಟಿ.ಇ.)– ಸದಸ್ಯರು
6. ಶ್ರೀ ಎಂ. ಚಂದ್ರಶೇಖರ್– ಸಾರ್ವಜನಿಕರು.
7. ಶ್ರೀ ಪಿಳ್ಳಪ್ಪ – ಸಾರ್ವಜನಿಕರು.
8. ಶ್ರೀ ಸುರೇಶ್ ಕುಮಾರ್ – ಸಾರ್ವಜನಿಕರು.
9. ಶ್ರೀಮತಿ ದೇವಕಿ– ಸಾರ್ವಜನಿಕರು.
10. ಶ್ರೀಮತಿ ಪ್ರೇಮಲತಾ – ಸಾರ್ವಜನಿಕರು.
11. ಶ್ರೀಮತಿ ಆರ್.ಪದ್ಮ – ಸಾರ್ವಜನಿಕರು.
12. ಶ್ರೀಮತಿ ಗಿರಿಜಾಂಬ – ಸಾರ್ವಜನಿಕರು.

****

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ 155ರ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ನೆರೆದಿದ್ದ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರಿಗೆ ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

**ಕಾಮಗಾರಿ ಇಲಾಖೆಗೆ ಸಂಬಂಧಪಟ್ಟ ವಿಷಯಗಳು.**

ಹನುಮಂತನಗರವ್ಯಾಪ್ತಿಯಲ್ಲಿ ಬರುವ ಕೆಲವು ರಸ್ತೆಯಲ್ಲಿ ಸುಮಾರು ಹಳೇ ಗಾಡಿಗಳು ನಿಂತಿದ್ದು ಎ.ಸಿ.ಪಿ. ರವರಿಗೆ ನೋಪಾರ್ಕಿಂಗ್ ಬೋರ್ಡನ್ನು ಹಾಕಲು ಪತ್ರವನ್ನು ಬರೆಯಲು ಸಭೆಯಲ್ಲಿ ಹಾಜರಿದ್ದ ನೋಡಲ್‌ಅಧಿಕಾರಿಗಳು ಸೂಚಿಸಿದರು.

ಹರಿಹರ ಗುಡ್ಡ ಉದ್ಯಾನವನದ ಪೂರ್ವದಿಕ್ಕಿನಲ್ಲಿ ಬರುವ ರಸ್ತೆಯಲ್ಲಿ ಪಾದಚಾರಿ ಮಾರ್ಗ ಮಾಡಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಮು.ತಿ.ನೋ

Scanned with CamScanner

ಸದರಿ ವಿಷಯದ ಕುರಿತು ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು

ವರ್ಷಋತು ರಸ್ತೆಯಲ್ಲಿ ಸಾರ್ವಜನಿಕರು/ಅಂಗಡಿಯವರು ಪಾದಚಾರಿ ಮಾರ್ಗದಲ್ಲಿ ಅನುಪಯುಕ್ತ ವಸ್ತುಗಳನ್ನು ಹಾಕಿರುತ್ತಾರೆ ಈ ಸಂಬಂಧ ಸಂಬಂಧಪಟ್ಟವರಿಗೆ ನೋಟಿಸನ್ನು ನೀಡಿ ತೆರವುಗೊಳಿಸಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಶ್ರೀ. ಚಂದ್ರುರವರು ಕೋರಿದರು.

ಸದರಿ ವಿಷಯದ ಕುರಿತು ಸ್ಥಳ ಪರಿವೀಕ್ಷಣೆ/ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

4ನೇ ಅಡ್ಡ ರಸ್ತೆಯಲ್ಲಿ ಅಂಗಡಿಯವರು ಪಾದಚಾರಿ ಮಾರ್ಗದಲ್ಲಿ ವ್ಯಾಪಾರದ ವಸ್ತುಗಳನ್ನು ಇಟ್ಟಿರುವುದನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಶ್ರೀ.ಪಿಳ್ಳಪ್ಪರವರು ಕೋರಿದರು.

ಸದರಿ ವಿಷಯದ ಕುರಿತು ಸ್ಥಳ ಪರಿವೀಕ್ಷಣೆ/ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹಿರಿಯ ಆರೋಗ್ಯ ಪರಿವೀಕ್ಷಕರು ಹನುಮಂತನಗರ ರವರು ತಿಳಿಸಿದರು.

ಪೈಪ್ ಲೈನ್ ರಸ್ತೆಯಲ್ಲಿ ರಸ್ತೆಬದಿ ಚರಂಡಿಯನ್ನು ದುರಸ್ತಿ ಮಾಡಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಶ್ರೀ. ಪಿಳ್ಳಪ್ಪರವರು ಕೋರಿದರು.

ಸದರಿ ವಿಷಯದ ಕುರಿತು ಸ್ಥಳ ಪರಿವೀಕ್ಷಣೆ/ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹಿರಿಯ ಆರೋಗ್ಯ ಪರಿವೀಕ್ಷಕರು ಹನುಮಂತನಗರ ರವರು ತಿಳಿಸಿದರು.

**ಬೀದಿ ದೀಪ ನಿರ್ವಹಣೆ ಕುರಿತು**

ಹನುಮಂತನಗರ ಹರಿಹರಗುಡ್ಡ ಉದ್ಯಾನವನದಲ್ಲಿ ಕೆಲವುಕಡೆ ವಿದ್ಯುತ್ ದೀಪ ಉರಿಯುತ್ತಿಲ್ಲ ವೆಂದು ಹಾಗೂ ಇದನ್ನು ಸರಿಪಡಿಸಿಕೊಳ್ಳಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಶ್ರೀ. ಪಿಳ್ಳಪ್ಪರವರು ಕೋರಿದರು.

ಹರಿಹರಗುಡ್ಡ ಉದ್ಯಾನವನದಲ್ಲಿ ವಿದ್ಯುತ್ ದೀಪ ಸರಿಪಡಿಸಲು ವಿದ್ಯುತ್ ವಿಭಾಗ ಬಿ.ಬಿ.ಎಂ.ಪಿ. ರವರಿಗೆ ಸೂಚಿಸಲಾಗುವುದು ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

**COVID-19 ಕಾಯಿಲೆ ಕುರಿತು**

COVID-19 ಕಾಯಿಲೆ ಕುರಿತು COVID-19 ಲಸಿಕೆಯನ್ನು ಸರ್ಕಾರದ ವತಿಯಿಂದ ಬಿಡುಗಡೆ ಮಾಡಿದ್ದು ಸಾರ್ವಜನಿಕರ ಹಿತದೃಷ್ಟಿಯಿಂದ ವಾರ್ಡ್‌ನ ನಾಗರೀಕರಿಗೆ ಸದರಿ ಲಸಿಕೆಯ ಕುರಿತು ಜಾಗ್ರತೆ ಮೂಡಿಸಲು ಕ್ರಮಕೈಗೊಳ್ಳಲು ನೋಡಲ್‌ಅಧಿಕಾರಿಗಳು ಸೂಚಿಸಿದರು.

ಮು.ತಿ.ನೋ

Scanned with CamScanner

**ಆರೋಗ್ಯ ಇಲಾಖೆ**

ಹನುಮಂತನಗರ ಎಕೆ ಕಾಲೋನಿ ಉದ್ಯಾನವನದ ಒಳಗೆ ತುಂಬ ಗಿಡಗಳು ಬೆಳೆದಿದ್ದು ಕ್ಲೀನಿಂಗ್ ಮಾಡಿಕೊಡಲು ಸಭೆಯಲ್ಲಿ ಹಾಜರಿದ್ದ ಶ್ರೀ.ಚಂದ್ರುರವರು ಕೋರಿದರು.

ಹನುಮಂತನಗರ ಎಕೆ ಕಾಲೋನಿ ಉದ್ಯಾನವನದ ಸ್ಥಳವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಪರಿವೀಕ್ಷಕರು ಹನುಮಂತನಗರ ರವರು ತಿಳಿಸಿದರು.

**ಕಂದಾಯ ಇಲಾಖೆ:**

ಹನುಮಂತನಗರ ವಾರ್ಡ್‌ನಲ್ಲಿ ಬಿಬಿಎಂಪಿಯ ಹಿತದೃಷ್ಟಿಯಿಂದ ನಿಗಧಿತ ಸಮಯದಲ್ಲಿ ಕಂದಾಯ ವಸೂಲಿಮಾಡಲು ಕ್ರಮಕ್ಕೈಗೊಳ್ಳಲು ಹಾಜರಿದ್ದ ಕಂದಾಯ ಅಧಿಕಾರಿಯವರಿಗೆ ನೋಡಲ್ ಅಧಿಕಾರಿಯವರು ಸೂಚಿಸಿದರು.

ವಾರ್ಡ್ ಕಮಿಟಿ ಸಭೆಯಲ್ಲಿ ಉಪಸ್ಥಿತರಿರುವ ಅಧಿಕಾರಿ ವರ್ಗದವರಿಗೆ, ವಾರ್ಡ್ ಕಮಿಟಿ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ಪ್ರತಿ ತಿಂಗಳ ಮೊದಲನೆಯ ಮತ್ತು ಮೂರನೇ ಶನಿವಾರದಂದು ವಾರ್ಡ್ ಕಮಿಟಿ ಸಭೆಯನ್ನು ಏರ್ಪಡಿಸಲಾಗುವುದು ಎಂದು ತಿಳಿಸುತ್ತಾ, ವಂದನಾರ್ಪಣೆ ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

16.01.21

ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ–155 ಹನುಮಂತನಗರ

ಅಧ್ಯಕ್ಷರು ವಾರ್ಡ್ ಸಮಿತಿ
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ–155 ಹನುಮಂತನಗರ

ಪ್ರತಿಯನ್ನು,

1. ಜಂಟಿ ಆಯುಕ್ತರು (ದಕ್ಷಿಣ) ರವರಿಗೆ ಮಾಹಿತಿಗಾಗಿ.
2. ಕೌನ್ಸಿಲ್ ಕಾರ್ಯದರ್ಶಿ ರವರಿಗೆ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು(ದಕ್ಷಿಣ) ರವರಿಗೆ ಮಾಹಿತಿಗಾಗಿ.
4. ಉಪ ಆಯುಕ್ತರು(ದಕ್ಷಿಣ) ರವರಿಗೆ ಮಾಹಿತಿಗಾಗಿ.
5. ಅಧೀಕ್ಷಕ ಅಭಿಯಂತರರು(ದಕ್ಷಿಣ) ರವರಿಗೆ ಮಾಹಿತಿಗಾಗಿ.
6. ಕಾರ್ಯಪಾಲಕ ಅಭಿಯಂತರರು ರವರಿಗೆ ಮಾಹಿತಿಗಾಗಿ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ಉಪವಿಭಾಗ, ಬಿ.ಬಿ.ಎಂ.ಪಿ ರವರಿಗೆ ಮಾಹಿತಿಗಾಗಿ.
8. ಕಛೇರಿ ಕಡತಕ್ಕೆ.

Scanned with CamScanner